



## ಜನಪ್ರಿಯ ನಾಸಿಕ್ ಬ್ಯಾಂಡ್ ಸೆಟ್



ಮಹಾರಾಷ್ಟ್ರದಲ್ಲಿ ಗಣೇಶೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅದನ್ನು ಕಣ್ತುಂಬಿಕೊಳ್ಳಲೆಂದೇ ಈಚೆಗೆ ನಾನು, ಮಗ ವಾಸವಾಗಿರುವ ಮುಂಬೈಗೆ ಬಂದೆ. ಬಹುತೇಕ ಬಹುಮಹಡಿ ಕಟ್ಟಡಗಳೇ ತುಂಬಿರುವ ಈ ಊರಿನಲ್ಲಿ ಸಾರ್ವಜನಿಕ ಹಾಗೂ ವೈಯಕ್ತಿಕವಾಗಿ ಮನೆಗಳಲ್ಲಿ ಗಣೇಶನ ಪ್ರತಿಷ್ಠಾಪನೆ ಮಾಡಿ, ಅವರವರ ಮನೆಯ ಪರಂಪರೆಯಂತೆ ವಿಸರ್ಜನೆ ಮಾಡುತ್ತಾರೆ. ವಾದ್ಯವೃಂದ ಕ್ಲಾರಿನೆಟ್, ಟಾಂಬೊರಿನ್, ಡ್ರಮ್ಸ್, ಟ್ರಂಪೆಟ್, ತ್ರಿಕೋನ ಇತ್ಯಾದಿ ಸಂಗೀತದ ಹೊರತಾಗಿ ಅಲ್ಲಿ ಬಹುತೇಕರು ಗಣೇಶನ ವಿಸರ್ಜನೆಗೆ 'ನಾಸಿಕ್ ಬ್ಯಾಂಡ್ ಸೆಟ್' ಕರೆಸುತ್ತಾರೆ.

ಆಯೋಜಕರು 'ನಾಸಿಕ್ ಬ್ಯಾಂಡ್ ಸೆಟ್' ವಾದ್ಯವೃಂದದವರೊಂದಿಗೆ ಮಾತನಾಡಿ ಎಷ್ಟು ಸಮಯ, ಎಲ್ಲಿಂದ–ಎಲ್ಲಿಯವರೆಗೆ ಬ್ಯಾಂಡ್ ಸೆಟ್ ಬಾರಿಸಬೇಕು ಎಂಬುದರ ಬಗ್ಗೆ ಒಪ್ಪಂದ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ನಾಲ್ಕೈದು ಜನರ ವಾದ್ಯವೃಂದಕ್ಕೆ ₹1000, ₹2000, ₹3000, ₹4000 ಪಡೆಯುತ್ತಾರೆ. ಹೆಚ್ಚು ಸಮಯ ಹಾಗೂ ದೂರದವರೆಗೆ ಬ್ಯಾಂಡ್ ಸೆಟ್ ಬಾರಿಸಿದರೆ ಹೆಚ್ಚು ಹಣ ಪಡೆಯುತ್ತಾರೆ. ಈ ನಾಸಿಕ್ ಡ್ರಮ್ ಬ್ಯಾಂಡ್‌ಗೆ ಎಲ್ಲಿಲ್ಲದ ಬೇಡಿಕೆ. ಬ್ಯಾಂಡ್ ಬಾರಿಸುತ್ತಿದ್ದಂತೆ ಆಯೋಜಕರು, ಯುವಕ, ಯುವತಿಯರು, ಮಹಿಳೆಯರು, ಬಾಲಕರೆಲ್ಲಾ ನೃತ್ಯ ಮಾಡುತ್ತಾರೆ. ಆ ಇಡೀ ವಾತಾವರಣ ನನಗಂತೂ ಹೊಸತನವನ್ನು ಕಣ್ಣ ಮುಂದೆ ತಂದು ನಿಲ್ಲಿಸಿತು.

–ರಘುನಾಥರಾವ್ ತಾಪ್ಸೆ, ದಾವಣಗೆರೆ



## 'ಸಾರಾ' ಸುಸ್ಥಿರ ಅಭಿವೃದ್ಧಿಯ ಕನಸು

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಬಟ್ಟೆಮಲ್ಲಪ್ಪ ಬಳಿಯ ದೊಂಬೆಕೊಪ್ಪದಲ್ಲಿರುವ 'ಸಾರಾ' ಸಂಸ್ಥೆಗೆ ಹೋದಾಗ ಕಂಡುಬಂದ ದೃಶ್ಯವಿದು. ಈ ಸಂಸ್ಥೆಯು ಸುಸ್ಥಿರ ಅಭಿವೃದ್ಧಿಯ ಕನಸು ನನಸಾಗಿಸಲು ಹಲವಾರು ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜಲಸಂರಕ್ಷಣೆ, ವನಸಂರಕ್ಷಣೆ, ಬೆಳೆಸಂರಕ್ಷಣೆ ಇತ್ಯಾದಿಗಳು ಇವುಗಳಲ್ಲಿ ಕೆಲವು. ಅಳಿವಿನಂಚಿನಲ್ಲಿರುವ ವಿವಿಧ ಜಾತಿಯ ಅಪರೂಪದ ಭತ್ತದ ತಳಿಗಳನ್ನು ಸಂರಕ್ಷಿಸಿ, ಪ್ರತೀ ವರ್ಷ ಸಾವಯವ ಕೃಷಿ ವಿಧಾನದಲ್ಲಿ ಬೀಜೋತ್ಪಾದನೆ ಮಾಡಿ ಕೃಷಿ ಕುಟುಂಬಗಳಿಗೆ ಬೆಳೆಯಲು ಹಂಚುತ್ತಿದ್ದಾರೆ.

ಇದರಿಂದ ಅಳಿವಿನಂಚಿನಲ್ಲಿರುವ ಭತ್ತದ ಬೆಳೆಗಳನ್ನು ಸಂರಕ್ಷಿಸಲು ಸಾಧ್ಯವಾಗುತ್ತಿದೆ. ಇಲ್ಲಿ ಬೇರೆ ಬೇರೆ ರಾಜ್ಯಗಳ, ಕರ್ನಾಟಕದ ವಿವಿಧ ಪ್ರದೇಶಗಳ ಸುಮಾರು 450ಕ್ಕೂ ಹೆಚ್ಚಿನ ಪ್ರಭೇದಗಳ ಭತ್ತದ ಸಂಗ್ರಹವಿದೆ. ಇದರ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳುತ್ತಿದ್ದಾರೆ.

–ಡಾ. ಟಿ. ಕೃಷ್ಣಮೂರ್ತಿ, ಉಜಿರೆ

## ಮರೆಯಾದ ರೀಲ್ ಕ್ಯಾಮೆರಾ

ಮೂವತ್ತು ವರ್ಷಗಳ ಹಿಂದೆ ಸಣ್ಣ ಸಣ್ಣ ಫೋಟೊಗ್ರಾಫರ್ ಬಳಿ ಹಾಗೂ ಮಧ್ಯಮ ವರ್ಗದವರ ಬಳಿಯಲ್ಲಿ ಇರುತ್ತಿದ್ದ ರೀಲ್ ಕ್ಯಾಮೆರಾಗಳು ಇಂದಿನ ಡಿಜಿಟಲ್ ಕ್ಯಾಮೆರಾಗಳ ಹಾಗೂ ಮೊಬೈಲ್‌ಗಳ ನಡುವೆ ವಿಶೇಷವಾಗಿ ಕಾಣುತ್ತವೆ. ಅವು ಬಹುತೇಕ ಕಣ್ಮರೆಯಾಗಿದ್ದು, ಆ್ಯಂಟಿಕ್‌ಗಳಂತೆ ಕೆಲವರು ಸಂಗ್ರಹಿಸಿಟ್ಟುಕೊಂಡಿದ್ದಾರೆ. ಅಂತಹದ್ದೇ ಒಂದು ಈ ಚಿತ್ರದಲ್ಲಿ ಕಾಣುತ್ತಿರುವ ಕ್ಯಾಮೆರಾ.

ಆಗಿನ ಸಮಯದಲ್ಲಿ ಯಾಶಿಕಾ, ಕೋನಿಕಾ, ಕೊಡ್ಯಾಕ್ ಕಂಪನಿಯ ಈ ಕ್ಯಾಮೆರಾಗಳು ಜನಪ್ರಿಯವಾಗಿದ್ದವು. ಇವುಗಳಲ್ಲಿ ಫಿಲ್ಮ್ ರೀಲ್ ಹಾಕಬೇಕಾಗುತ್ತಿತ್ತು. ಈ ಒಂದು ರೀಲ್ ಬೆಲೆ 100–120 ರೂಪಾಯಿ. ಒಂದು ರೀಲ್ ಹಾಕಿದರೆ 36 ಫೋಟೊ ತೆಗೆಯಬಹುದಾಗಿತ್ತು. ಇದರಲ್ಲಿ 1.5 ವೋಲ್ಟ್‌ನ ಎರಡು ಪೆನ್ಸಿಲ್ ಶೆಲ್‌ಗಳನ್ನು ಬಳಸಲಾಗುತ್ತಿತ್ತು. ಫೋಟೊ ಕ್ಲಿಕಿಸಿದ ನಂತರ ಒಂದು ಸುತ್ತು ರೀಲ್ ಸುತ್ತಿಕೊಳ್ಳಲು ಮೇಲಿನ ತಿರುಗಣೆಯನ್ನು ಕೈಯಿಂದ ತಿರುಗಿಸಿದ ನಂತರ ಮತ್ತೊಂದು ಫೋಟೊ ತೆಗೆಯಬಹುದಿತ್ತು. ಕೆಲ ಕ್ಯಾಮೆರಾಗಳಲ್ಲಿ ಆಟೋಮ್ಯಾಟಿಕ್ ತಿರುಗುಣಿ ಇತ್ತು. ಅದು ಆ ಕಾಲದ ಅತ್ಯಾಧುನಿಕ ತಂತ್ರಜ್ಞಾನ.

–ಶರದ ಕುಲಕರ್ಣಿ, ಬೀದರ್

